## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬನಹಟ್ಟಿ.

ಸಿ.ಸಿ. ನಂ.**2078/2023**

| | | |
|---|---|---|
| ಆರೋಪಿಯ ಹೆಸರು | : | ಆನಂದ ಬಾಡಗಂಡಿ |
| ತಂದೆಯ ಹೆಸರು | : | ಶಂಕರೆಪ್ಪ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಚಾಲಕ |
| ವಾಸ ಸ್ಥಳ | : | ಬನಹಟ್ಟಿ, ತಾಃ ರಬಕವಿ-ಬನಹಟ್ಟಿ |

ಆರೋಪಿಯ ಹೇಳಿಕೆ ಕಲಂ 313 ದಂಡ ಪ್ರಕ್ರಿಯಾ ಸಂಹಿತೆ ಅಡಿಯಲ್ಲಿ

ಪ್ರಶ್ನೆ - 1) ಫಿರ್ಯಾದಿ ಪರ ಸಾಕ್ಷ್ಯವನ್ನು ಕೇಳಿದ್ದೀರಾ ?

ಉತ್ತರಃ -

ಪ್ರಶ್ನೆ - 2) ಪಿ.ಡಬ್ಲ್ಯೂ -1 ಶೇಷಗಿರಿ ತಂಃ ಶ್ರೀನಿವಾಸ ಜೋಶಿ ಇವರು ತಮ್ಮ ಸಾಕ್ಷಿಯಲ್ಲಿ "ಆರೋಪಿತನು ಅವರ ಸೊಸೈಟಿ ಕಡೆಯಿಂದ ತನ್ನ ಪ್ರಾಪಂಚಿಕ ಅಡಚಣೆ ಸಲುವಾಗಿ ರೂ. 69,172/- ಅಂತಾ ಕೈಗಡ ಸಾಲ ವಿನಂತಿಸಿಕೊಂಡಿದ್ದು, ನಂತರ ಸದರಿ ಸೊಸೈಟಿಯು ಆರೋಪಿತನಿಗೆ ಸಾಲವನ್ನು ನೀಡಿದ್ದು, ಸದರಿ ಸಾಲವನ್ನು ತೀರಿಸುವ ಸಲುವಾಗಿ ದಿನಾಂಕಃ 05.09.2023 ರಂದು ಕರ್ನಾಟಕ ಬ್ಯಾಂಕ, ಬನಹಟ್ಟಿ ಶಾಖೆಯ ಚೆಕ್ ನಂ- 014958 ರ ಮೇಲೆ ರೂ. 69,172/- ಗಳನ್ನು ಪಾವತಿ ಮಾಡುವ ಉದ್ದೇಶದಿಂದ ಅಂದೇ ನಮ್ಮ ಸೊಸೈಟಿ ಹೆಸರಿಗೆ ಬರೆದುಕೊಟ್ಟಿರುತ್ತಾನೆ. ಸದರಿ ಚೆಕ್ಕನ್ನು ನಮ್ಮ ಖಾತೆ ಇರುವ ದಿ ಬಾಗಲಕೋಟ ಜಿಲ್ಲಾ ಕೇಂದ್ರ ಕೋ-ಆಪ್ ಬ್ಯಾಂಕ ಲಿ, ಬಾಗಲಕೋಟ ಶಾಖೆ ಬನಹಟ್ಟಿಯಲ್ಲಿ ನಗದೀಕರಣಕ್ಕಾಗಿ ಕೊಟ್ಟಿದ್ದು, ಆರೋಪಿಯ ಖಾತೆಯಲ್ಲಿ **"Drawer Signature Differs"** ಎಂಬ ಹಿಂಬರಹದೊಂದಿಗೆ ದಿಃ 13.09.2023 ರಂದು ಮರಳಿ ಬಂದಿರುತ್ತದೆ ಅಂತಾ ಹೇಳುತ್ತಾರೆ ಇದಕ್ಕೆ ನೀವು ಏನು ಹೇಳುತ್ತೀರಿ ?

ಉತ್ತರಃ -

ಪ್ರಶ್ನೆ - 3) ಪಿ.ಡಬ್ಲ್ಯೂ-1 ರವರು ಮುಂದುವರೆದು ತಮ್ಮ ಸಾಕ್ಷಿಯಲ್ಲಿ ತನ್ನ ವಕೀಲರ ಮುಖಾಂತರ ದಿನಾಂಕಃ25.09.2023 ರಂದು ನೋಟಿಸನ್ನು ನೀಡಿದ್ದು ಸದರಿ ನೋಟೀಸು **Unclaimed** ಎನ್ನುವ

ಶರಾದೊಂದಿಗೆ ದಿ:**03.10.2023** ರಂದು ಫಿರ್ಯಾದುದಾರಿಗೆ ವಾಪಸ್ ಆಗಿದ್ದು, ಇಲ್ಲಿಯವರೆಗೂ ಸಹ ಹಣ ಕೊಡುವ ವ್ಯವಸ್ಥೆ ಮಾಡಿರುವುದಿಲ್ಲ. ಆದ್ದರಿಂದ ಆರೋಪಿಯ ಮೇಲೆ ಕಾನೂನು ಕ್ರಮ ಜರುಗಿಸಬೇಕೆಂದು ಹೇಳುತ್ತಾರೆ ಅಂತಾ ಹೇಳುತ್ತಾರೆ ಇದಕ್ಕೆ ನೀವು ಏನು ಹೇಳುತ್ತೀರಿ**?**

ಉತ್ತರ: **-**

ಪ್ರಶ್ನೆ **- 4)** ನಿಮ್ಮ ಪರವಾಗಿ ಏನಾದರೂ ಸಾಕ್ಷಿ ಮಾಡಿಸುವುದು ಇದೆಯಾ **?**

ಉತ್ತರ: **-**

ಪ್ರಶ್ನೆ **- 5)** ನಿಮ್ಮ ಪರವಾಗಿ ಏನನ್ನಾದರೂ ಹೇಳುವುದು ಇದೆಯಾ**?**

ಉತ್ತರ: **-**

ಮೇಲೆ ಹೇಳಲಾದ ಪ್ರಶ್ನೆಗಳನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಅವನು ತಿಳಿದುಕೊಂಡು ಕೊಟ್ಟ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ದಾಖಲಿಸಿಕೊಳ್ಳಲಾಗಿದೆ ಎಂದು ದೃಢೀಕರಿಸಲಾಗಿದೆ.

ಸ್ಥಳ: ಬನಹಟ್ಟಿ
ದಿನಾಂಕ: **27.01.2026**

Sd/-
ಪ್ರ. ದ. ನ್ಯಾ.. ದಂಡಾಧಿಕಾರಿಗಳು,
ಬನಹಟ್ಟಿ .

ಆರೋಪಿಯ ಸಹಿ